**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**

**ಮುಳಬಾಗಿಲು.**

**ಸಿ. ಸಿ. ಸಂಖ್ಯೆ: 23/2022**

ದಿನಾಂಕಃ 22.11.2025

| | | |
|---|---|---|
| ಹೆಸರುಃ | ತಮ್ಮರೆಡ್ಡಿ | ಸಿ.ಡಬ್ಲ್ಯೂಃ 03 |
| ತಂದೆಯ ಹೆಸರು | ನಾರಾಯಣಪ್ಪ | ಪಿ. ಡಬ್ಲ್ಯೂಃ 01 |
| ವಯಸ್ಸು | 75 ವರ್ಷ | |
| ಕೆಲಸ | ವ್ಯವಸಾಯ | ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ | ಮಜರಾ ದಿನ್ನೆ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದಃ**

ಮೃತ ಚಾಸಾ-1 ನನ್ನ ಖಾಸಾ ಸಹೋದರಿ. ಚಾಸಾ-2,4 ಮತ್ತು 5 ರವರು ನನಗೆ ಪರಿಚಯಸ್ಥರು.

ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಮಾವನ ಮಗನಾಗಬೇಕು.

ಈ ಪ್ರಕರಣದ ಕುರಿತು ನನಗೆ ಮಾಹಿತಿ ಇರುವುದಿಲ್ಲ. ನಾನು ಘಟನೆಯನ್ನು ಕಣ್ಣಾರೆ ಕಂಡಿರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಮಹಜರು ಕ್ರಮ ಜರುಗಿಸಿರುವುದಿಲ್ಲ. ಸಾಕ್ಷಿಯೂ ಮಹಜರಿನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು, ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

***ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ರವರಿಂದಃ***

ದಿ. 23.10.2023 ರಂದು ಬೆಳಿಗ್ಗೆ 10 ಗಂಟೆ ಸಮಯದಲ್ಲಿ ಚಾಸಾ-1 ರವರ ಮನೆಯ ಬಳಿ ನಾನು ಬರುತ್ತಿದ್ದಾಗ ಆರೋಪಿ ಚಾಸಾ-1 ರವರ ಮನೆಯ ಒಳಗೆ ಅಕ್ರಮ ವಾಗಿ ಪ್ರವೇಶಿಸಿ ಮನೆಯ ಹಳೆಯ ಹಂಚುಗಳನ್ನು ತೆಗೆದು ಹಾಕುತ್ತಿದ್ದಾಗ, ಆಗ ನಾನು ಆರೋಪಿಗೆ ಯಾಕೇ ತೆಗೆದು ಹಾಕುತ್ತಿದ್ದೀಯಾ ಎಂದು ಕೇಳಿದಾಗ, ಆರೋಪಿಯೂ ನನಗೆ ಸೇರಿದ ಜಾಗ ಎಂದು ಹೇಳಲಾಗಿ, ಆಗ ನಾನು ಸದರಿ ವಿಚಾರವನ್ನು ಚಾಸಾ-1 ರವರಿಗೆ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ತಿಳಿಸಲಾಗಿ, ಆಗ ಚಾಸಾ-1 ರವರು ಬಂದು ಕೇಳಿದಾಗ ಆರೋಪಿಯೂ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿ. 28.10.2021 ರಂದು ಪೋಲಿಸರು ಘಟನಾ ಸ್ಥಳವಾದ ಚಾಸಾ-1 ರವರ ಮನೆಯ ಹತ್ತಿರ ಸಂಜೆ 5.15 ರಿಂದ 6.00 ಗಂಟೆಯವರೆಗೆ ನನ್ನ ಮತ್ತು ಚಾಸಾ-4 ರಿಂದ 6 ರವರ ಸಮಕ್ಷಮ ನಿಪಿ-1 ರಂತೆ ಪಂಚನಾಮೆಯನ್ನು ಜರುಗಿಸಿರುತ್ತಾರೇ ಎಂದರೆ ಸರಿಯಲ್ಲ. ಆರೋಪಿ ಕೃತ್ಯದಿಂದ ಚಾಸಾ-1 ರವರಿಗೆ 5 ಸಾವಿರ ರೂಪಾಯಿ ನಷ್ಟ ಉಂಟಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಈಗ ಓದಿ ಹೇಳಿದಂತೆ ದಿ. 28.10.2021 ರಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರ ಮಾಹಿತಿ ಇದ್ದರೂ ಕೂಡ ಆರೋಪಿ ನನ್ನ ಮಾವನ ಮಗನಾಗಿರುವುದರಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***ಪಾಟೀ ಸವಾಲು: ಆರೋಪಿ ಪರ ವಕಿಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಗೌಡ ಜಗದೀಶ ರುದ್ರೇ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಮುಳಬಾಗಿಲು.